ಕೂಡಲೇ ಆ ಕಾರ್ಯವನ್ನು ಕೈಗೊಳ್ಳಲು ಮುಂದಾಗಿ ತನ್ನ ಅಧಿಕಾರವರ್ಗಕ್ಕೆ ಸೂಚನೆ ನೀಡಿದನು. ಈ ಕೆಲಸಕ್ಕಾಗಿ ಬೇಕಾದ ಡಾಕ್ಯುಮೆಂಟೇಷನ್ ಕೆಲಸ ಮುಗಿಸಿ ಅದರ ಒಂದೊಂದು ಬಿಡಿ ಭಾಗಕ್ಕೂ ಸಂಖ್ಯೆ ಕೊಟ್ಟು, ಅದರ ಪೂರ್ಣ ನಕ್ಷೆ ಸಿದ್ಧಗೊಳಿಸಲಾಯಿತು.

ಕಲ್ಯಾಣ ಮಂಟಪವನ್ನು ಸಾಗಿಸಲು ಬೇಕಾದ ಹಡಗನ್ನು ತರಿಸಿಕೊಳ್ಳಲು ಅಗತ್ಯ ಸೂಚನೆಯನ್ನು ಇಂಗ್ಲೆಂಡಿನ ಹಡಗು ಕಂಪನಿಯೊಂದಕ್ಕೆ ನೀಡಲಾಯಿತು. ಆದರೆ ಭಾರತೀಯ ಕಲಾಭಿಮಾನಿಗಳ ಅದೃಷ್ಟ ಚೆನ್ನಾಗಿತ್ತು ಎಂದು ಕಾಣುತ್ತದೆ. ಈ ಕೆಲಸಕ್ಕಾಗಿ ಇಂಗ್ಲೆಂಡಿನಿಂದ ಬರುತ್ತಿದ್ದ ಹಡಗು ಅರ್ಧದಾರಿಯಲ್ಲೇ ಸಮುದ್ರದಲ್ಲಿ ಮುಳುಗಿಹೋಯಿತು. ಗವರ್ನರನು ಕೈ ಕೈ ಹಿಸುಕಿಕೊಂಡನು. ಆದರೆ ಏನೂ ಮಾಡುವಂತಿರಲಿಲ್ಲ! ಇನ್ನೊಂದು ಹಡಗನ್ನು ತರಿಸಿಕೊಂಡು ಆ ಕೆಲಸ ಮುಂದುವರಿಸಲು ಭಾರತದಲ್ಲಿ ಕಂಪನಿಯ ಆಡಳಿತ ಸನ್ನಿವೇಶ ಬದಲಾಗಿ, ಗವರ್ನರನ ಆಶೆ ಭಗ್ನವಾಯಿತು! ಅದರಿಂದಾಗಿ ಆ ಯೋಜನೆಯನ್ನೇ ಕೈಬಿಡಲಾಯಿತು. ಅದೃಷ್ಟವಶಾತ್ ಆ ಸುಂದರ ಕಲ್ಯಾಣ ಮಂಟಪ ಅಲ್ಲಿಯೇ ಉಳಿದಿದೆ.

ವೆಲ್ಲೂರಿನ ಜಲಕಂಠೇಶ್ವರ ದೇವಾಲಯವನ್ನು ಸಾಂಬುವರಾಯ ವಂಶದ ರಾಜ ವೆಂಡ್ರುಮಾನ್‌ಕೊಂಡ ಸಾಂಬುವರಾಯನು ಕ್ರಿ.ಶ.1322–1339ರ ಅವಧಿಯಲ್ಲಿ ನಿರ್ಮಿಸಿದುದಾಗಿ ತಿಳಿದುಬರುತ್ತದೆ.

ವಿಜಯನಗರ ಚಕ್ರವರ್ತಿ ಸದಾಶಿವರಾಯನ ಆಳ್ವಿಕೆಯ ಕಾಲದಲ್ಲಿ ಚಿನ್ನಬೊಮ್ಮನಾಯಕನು ವೆಲ್ಲೂರಿನ ಸಾಮಂತನಾಗಿದ್ದನು. ಆ ಕಾಲದಲ್ಲೇ ಸದಾಶಿವರಾಯನ ಆಜ್ಞಾನುಸಾರ ಜಲಕಂಠೇಶ್ವರ ದೇವಾಲಯದ ಆವರಣದಲ್ಲಿಯೇ ಈ ಕಲ್ಯಾಣ ಮಂಟಪ ಮತ್ತು ಬೃಹತ್ ರಾಯಗೋಪುರವನ್ನು ನಿರ್ಮಿಸಲಾಯಿತು. ಆಗಲೇ ಚಿನ್ನಬೊಮ್ಮನಾಯಕನು ದೇವಸ್ಥಾನಕ್ಕೆ ಚಕ್ರವರ್ತಿ ಸದಾಶಿವರಾಯನ ಅಪ್ಪಣೆ ಪಡೆದು ಕೆಲವಾರು ಗ್ರಾಮಗಳನ್ನು ಉಂಬಳಿ ಹಾಕಿ ಕೊಟ್ಟನು.

ಕಲ್ಯಾಣ ಮಂಟಪವನ್ನು ದೇವಾಲಯದ ಮೊದಲ ಪ್ರಾಕಾರದ ಆಗ್ನೇಯ ದಿಕ್ಕಿನಲ್ಲಿ ಪ್ರಾಕಾರದ ಗೋಡೆಗೆ ಅಂಟಿಕೊಂಡಂತೆ ವಿಶಾಲ ಅಧಿಷ್ಠಾನದ ಮೇಲೆ ನಿರ್ಮಿಸಲಾಗಿದೆ. ಅದನ್ನು ಕೇಂದ್ರಸ್ಥಾನದಲ್ಲಿ ಮೂರು ಹಂತಗಳಲ್ಲಿ 46 ಕಂಬಗಳನ್ನಾಧರಿಸಿ ರಚಿಸಲಾಗಿದೆ. ಮೊದಲ ಹಂತ ವಿಶಾಲವಾಗಿದ್ದು, 24 ಕಂಬಗಳನ್ನಾಧರಿಸಿದೆ. ಇನ್ನೆರಡು ಹಂತಗಳು ಮೂರು ಕಡೆಯೂ ಗೋಡೆಗಳಿಂದಾವರಿಸಿದೆ. ಎರಡನೆಯ ಹಂತ ಮೊದಲನೆಯದಕ್ಕಿಂತ ಸುಮಾರು ಒಂದು ಮೀಟರ್ ಎತ್ತರವಿದ್ದು, ಮೂರನೆಯ ಹಂತ ಎರಡನೇ ಹಂತದ ಮೇಲೆ ಒಂದು ಮೀಟರ್ ಎತ್ತರದಲ್ಲಿದೆ. ಆದರೆ ಮೂರು ಹಂತಗಳನ್ನು ಹತ್ತಿ ಮೇಲೆ ಹೋಗಲು ಒಂದಕ್ಕೂ ಪಾವಟಿಗೆಗಳನ್ನು ಮಾಡಿಸಿಲ್ಲ. ಅದೇಕೋ ತಿಳಿಯದು!.

ಅತ್ಯಂತ ಪ್ರಮುಖ ಹಾಗೂ ಅತ್ಯಂತ ಸುಂದರವಾದ ವಾಸ್ತುಶಿಲ್ಪದ ಭಾಗವೆಂದರೆ, ಮೂರನೆಯ ಹಂತದ ಕೆಳಗಿರುವ ಕೂರ್ಮಪೀಠ. ನಾಲ್ಕೂ ಕಾಲುಗಳನ್ನು ಚಾಚಿ ಮಲಗಿ ಭೂಭಾರವನ್ನು ಹೊತ್ತಿರುವ ಕೂರ್ಮನನ್ನು (ವಿಷ್ಣುವಿನ ಒಂದು ಅವತಾರ) ಬಹಳ ಸುಂದರವಾಗಿ ಕಡೆಯಲಾಗಿದೆ. ಆ ಹಂತದ ಸುತ್ತಲೂ ಎಂಟು ದಿಕ್ಕುಗಳಲ್ಲಿಯೂ ದಿಕ್ಪಾಲಕರು ಮತ್ತು ಭೂಭಾರ ಹೊತ್ತಿರುವ ಅಷ್ಟದಿಗ್ಗಜಗಳನ್ನು ಸುಂದರವಾಗಿ ಕಡೆಯಲಾಗಿದೆ. ಅಲ್ಲದೆ ಆದಿಶೇಷ ಮತ್ತಿತರ ಪ್ರಮುಖ ನಾಗಗಳು ತಮ್ಮ ಹೆಡೆಯರಳಿಸಿ ಭೂಭಾರ ಹೊರುವುದರಲ್ಲಿ ನೆರವಾಗಿವೆ. ಈ ಹಂತದ ಆಲಂಕಾರಿಕ ಹಾಗೂ ನಾಜೂಕಾದ ಶಿಲ್ಪಗಳು ವಿಶಿಷ್ಟ ಹಾಗೂ ಆ ಕಾಲದ ಕಲೆಯ ಪರಾಕಾಷ್ಠೆಯಾಗಿ ಕಂಗೊಳಿಸುತ್ತವೆ.

ಮಂಟಪವನ್ನು ಮೂರು ಭಾಗಗಳಾಗಿ ವಿಭಜಿಸಿದ್ದು, ಅವುಗಳ ಅಧಿಷ್ಠಾನದ ಪೂರ್ವ ದಿಕ್ಕಿನಲ್ಲಿ ಮೂರು ಹಂತಗಳಲ್ಲಿಯೂ ಅತ್ಯಂತ ಸುಂದರವಾದ ಶಿಲ್ಪಗಳನ್ನು ಕಡೆದಿರಿಸಲಾಗಿದೆ. ಅಲ್ಲಿ ದೇವಾನುದೇವತೆಗಳ ಹಾಗೂ ಭೂತಗಣಗಳ ಶಿಲ್ಪಗಳು ಬಹಳ ಸುಂದರವಾಗಿವೆ.



ಮಂಟಪದ ಮೇಲ್ಛಾವಣಿಯಲ್ಲಿ ಅರಳಿದ ಕಮಲದ ಹೂವಿನ ಮೇಲೆ ಎರಡು ಸುತ್ತು ಚಕ್ರಾಕಾರವಾಗಿ ಒಂದೊಂದು ಸುತ್ತಿನಲ್ಲಿ 16 ಗಿಳಿಗಳು ಜೋಲುಬಾಲದ (ಬಾವಲಿ) ಹಕ್ಕಿಯಂತೆ ಬುಡಮೇಲಾಗಿ ಕುಳಿತಿವೆ. ಪಕ್ಷಿ ಲೋಕದಲ್ಲಿ ಜೋಲುಬಾಲದ ಹಕ್ಕಿಯನ್ನು ಬಿಟ್ಟರೆ ಹೀಗೆ ಬುಡಮೇಲಾಗಿ ಎರಡೂ ಕಾಲುಗಳನ್ನಾಧರಿಸಿ ಕುಳಿತುಕೊಳ್ಳುವ ಹಕ್ಕಿ ಗಿಳಿಯೊಂದೇ! ಕಮಲದ ದಳಗಳಿಂದ ಬೀಳುವ ಹನಿ ಹನಿ ನೀರನ್ನು ಅವು ಮುತ್ತು ಎಂದೇ ಭಾವಿಸಿ ಕುಡಿಯುತ್ತವೆ!

ಈ ವೃತ್ತದ ಹೊರಗೆ ಕೀರ್ತಿಮುಖಗಳ ಜೊತೆಗೆ ಒಂದು ಸಾಲು ಹಂಸಗಳನ್ನು ಕಂಡರಿಸಲಾಗಿದೆ. ಅಲ್ಲದೆ ಈ ಭುವನೇಶ್ವರಿ (ಚಾವಣಿ)ಯಲ್ಲಿ ಅಮೋಘವಾದ ಉಮಾಮಹೇಶ್ವರ ಶಿಲ್ಪ ಕೆತ್ತಲಾಗಿದೆ. ಇನ್ನೊಂದು ಕಡೆ ವಿಜಯನಗರದ ಚಕ್ರವರ್ತಿ ಸದಾಶಿವರಾಯ ಮತ್ತು ಆತನ ಸಾಮಂತ ಚಿನ್ನಬೊಮ್ಮನಾಯಕರು ತಮ್ಮ ಅನುಚರರೊಂದಿಗೆ ಇರುವ ಶಿಲ್ಪ ಕೆತ್ತಲಾಗಿದೆ. ಮಂಟಪದ ಉತ್ತರದ ಅಧಿಷ್ಠಾನದ ಮೇಲೆ ಅರ್ಜುನನ ತಪಸ್ಸು ಮತ್ತು ಶಿವನು ಅದನ್ನು ಮೆಚ್ಚಿ ಪಾಶುಪತಾಸ್ತ್ರ ನೀಡುವ ಮೂರ್ತಿ ಶಿಲ್ಪ ಅತ್ಯಂತ ಸುಂದರವಾಗಿದೆ.

ಕಂಬಗಳ ಮೇಲೆ ನವಿಲನ್ನೇರಿರುವ ಷಣ್ಮುಖ, ಗೋವರ್ಧನ ಗಿರಿಧಾರಿ, ವೃಷಭವಾಹನ ಶಿವ, ವೀರಭದ್ರ, ಕೃಷ್ಣನ ಪ್ರಾಣ ಹೀರಲು ಬಂದ ರಾಕ್ಷಸಿ ಪೂತನಿ, ಉಗ್ರನರಸಿಂಹ, ದುರ್ಗೆ, ಅಲಂಕಾರನಿರತ ವನಿತೆ, ಕಂಬದಲ್ಲಿ ಕೊರೆದ ಸಣ್ಣ ಕಂಬ, ಅದರಲ್ಲಿಯೇ ಜಾಲಂಧ್ರದ ಅಳವಡಿಕೆ, ಸುಮಾರು 9 ಅಡಿ ಎತ್ತರಕ್ಕೆ ಮುಂಗಾಲುಗಳನ್ನು ಚಾಚಿ ಮುನ್ನೆಗೆಯಲು ಸಿದ್ಧವಾದ ಕುದುರೆ, ಯಾಳಿ ಕಂಬಗಳು, ಮಕರ ವಾಹಿನಿ ಗಂಗಾದೇವಿ, ಶ್ರೀರಾಮ, ಹನುಮಂತ, ನಟರಾಜ, ಮೊದಲಾದ ಶಿಲ್ಪಗಳು ಮನೋಹರವಾಗಿದ್ದು, ಜೀವತಳೆದು ಬಂದಂತೆ ಭಾಸವಾಗುತ್ತದೆ.

ದಕ್ಷಿಣಕ್ಕೆ ಮುಖ ಮಾಡಿರುವ ಗೋಡೆ ಮೇಲೆ ಪ್ರಸಿದ್ಧ ಸಂತ, ಸಂಗೀತಪಟು ಅಣ್ಣಮಾಚಾರ್ಯರು ಕೈಯಲ್ಲಿ ತಾಳ ತಂಬೂರಿ ಹಿಡಿದು ಶ್ರೀನಿವಾಸನನ್ನು ಪೂಜಿಸುವುದನ್ನು ಕಾಣಬಹುದು. ಈ ಮಂಟಪದಲ್ಲಿರುವ ಶಿಲ್ಪಗಳೆಲ್ಲವೂ ಉಷ್ಕೃಷ್ಟ ಮಾದರಿಯ ಉಬ್ಬು ಚಿತ್ರಗಳಾಗಿವೆ. ಅವುಗಳನ್ನು ಕಂಚಿನ ಮೂರ್ತಿಗಳಂತೆ ಕಾಣುವಂತೆ ಕಂಡರಿಸಲಾಗಿದೆ. ಉಳಿದೆಲ್ಲ ಕಡೆ ದೇವಾಲಯಗಳಲ್ಲಿರುವ ಕಲ್ಯಾಣ ಮಂಟಪಗಳಿಗಿಂತ ಆಕಾರದಲ್ಲಿ ಸಣ್ಣದೆಂದು ಕಂಡರೂ ಇದು ಅವೆಲ್ಲವುಗಳಿಗಿಂತ ಅದ್ಭುತ ಕಲಾಕೋಶ ಹಾಗೂ ವಸ್ತು ಸಂಗ್ರಹಾಲಯವೆಂದು ತಜ್ಞರ ಅಭಿಪ್ರಾಯ. ಮಂಟಪದ ಪ್ರತಿಯೊಂದು ಅಂಗುಲವೂ ಶಿಲ್ಪಿಯ ಕುಶಲತೆಯ ಕೈಚಳಕವನ್ನು ತೆರೆದು ತೋರಿಸುತ್ತದೆ.

ಪ್ರತಿಕ್ರಿಯಿಸಿ: feedback@sudha.co.in